# ನಕ್ಸಲಬರಿ

## ಒಂದು ಊರು ಮಾತ್ರವೇ ಅಲ್ಲ

ತೆಲುಗು ಮೂಲ :

**ಸಿಎಸ್‌ಆರ್ ಪ್ರಸಾದ್ (ಇಂಗ್ಲೀಷ್‌ನಿಂದ)**

ತೆಲುಗಿನಿಂದ ಕನ್ನಡಕ್ಕ :

**ಕಸ್ತೂರಿ**

**'NAKSALBARI'**

Translated to Kannada by Kasturi

**Published by**

© Publisher

First Edition : 2018

Pages : 128

Paper used : 70 GSM Maplitho

**ಬೆಲೆ : ` 140/-**

**ಮುಖಪುಟ ವಿನ್ಯಾಸ :**
**ಟಿ.ಎಂ. ನಾಗರಾಜ್**

**ಅಕ್ಷರ ಜೋಡಣೆ :**
**ಉಲ್ಲಾಸ್ ಗ್ರಾಫಿಕ್ಸ್,** ತುಮಕೂರು.

**ಹಂಚಿಕೆದಾರರು :**
**ಎ.ಕೆ. ಬುಕ್ ಡಿಸ್ಟ್ರಿಬ್ಯೂಟರ್ಸ್**
ಅವೆನ್ಯೂ ರಸ್ತೆ, ಬೆಂಗಳೂರು.

# ಪರಿವಿಡಿ


ಮೊದಲ ಭಾಗ

1. ಒಂದು ವಸಂತ ಮೇಘ ಗರ್ಜನೆ
2. ದಾವಾನಲ
3. ವಿಮುಕ್ತಿಮಾರ್ಗ
4. ಭಾರತೀಯ ಕಮ್ಯುನಿಸ್ಟರು
5. ವಿಪ್ಲವಪಾರ್ಟಿ
6. 1970ರ ದಶಕವನು ವಿಮುಕ್ತಿ ದಶಕವಾಗಿ ಬದಲಿಸಿರಿ
7. ಜ್ವಲಿಸುವುದಕ್ಕೆ ಇದೇ ಸಮಯ
8. ಉಕ್ಕುಪಾದ

ಎರಡನೇ ಭಾಗ

9. ಹಿನ್ನಡೆ – ಪುನರ್‌ನಿರ್ಮಾಣ

ಮೂರನೇ ಭಾಗ

10. ಉಳುವವನಿಗೆ ಭೂಮಿ
11. ಜಾತಿಸೇನೆಗಳು – ವರ್ಗ ಹೋರಾಟ
12. ಕೆಂಪು ಪ್ರತಿಭಟನಾ ನೆಲೆಗಳ ನಿರ್ಮಾಣ
13. ಉರಿಯುತ್ತಿರುವ ಬಯಲುಗಳು, ಕಾಡುಗಳು
14. ಲಾಲ್‌ಬನೋ ಗುಲಾಮಿ ಛೋಡೋ
15. ನೀರಿನಲ್ಲಿ ಮೀನಿನಂತೆ
16. ಜನಯುದ್ಧ
17. ನಕ್ಸಲ್ಬರಿಗೆ ಸಾವಿಲ್ಲ

## ಒಂದು ವಸಂತ ಮೇಘ ಗರ್ಜನೆ

ಏಪ್ರಿಲ್ 22, 1992... ಕಲಕುತ್ತಾ ನಗರವಾಸಿಗಳ ಕಣ್‌ಮುಂದೆ ತುಂಬಾ ಕಾಲದಿಂದ ಅವರು ನೋಡದ ಒಂದು ದೃಶ್ಯ. ಬೀದಿಗಳ ಗುಂಟಾ ಸಾವಿರಾರು ಜನರ ಕವಾಯತು. ತಮ್ಮ ಸಂಪ್ರದಾಯ ಸಹಜವಾದ ಬಿಲ್ಲುಬಾಣಗಳ ಧರಿಸಿದ ಶಸ್ತ್ರ ಸಜ್ಜಿತರಾದ ಆದಿವಾಸಿಗಳು, ಮಾವೋ, ಚಾರುಮಜುಂದಾರ್‌ರ ನಿಲುವೆತ್ತರದ ಚಿತ್ರಪಟಗಳನ್ನು ಹಿಡಿದುಕೊಂಡ ಯುವಜನ, ಪ್ರಕಾಶಮಯವಾಗಿ ಹೊಳೆಯುತ್ತಿದ್ದ ಕೆಂಪನೆ ಉಡುಗೆಗಳ ಧರಿಸಿದ ಸಾಂಸ್ಕೃತಿಕ ತಂಡಗಳು.

ಸಾಮ್ರಾಜ್ಯಶಾಹಿ ನಶಿಸಲಿ !
ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯನ್ನು, ವಿಶ್ವಬ್ಯಾಂಕನ್ನು ಒದ್ದು ಬಡಿಯಿರಿ!
ನೂತನ ಪ್ರಜಾಪ್ರಭುತ್ವ ಕ್ರಾಂತಿ ವರ್ಧಿಸಲಿ!
ಶಸ್ತ್ರಸಜ್ಜಿತ ಹೋರಾಟವೇ ವಿಮುಕ್ತಿಗೆ ದಾರಿ!
ನಕ್ಸಲ್ಬರಿ ಪಂಥವೇ ಏಕೈಕ ಪಂಥಾ!

ತಿರುವುಗಳು ತಿರುಗಿದ ಬೀದಿಗಳ ಗುಂಟಾ ಮೆರವಣಿಗೆ ನಿಧಾನವಾಗಿ ಕದಲಿಹೋಗುತ್ತಾ ಇದೆ. ಅದು ಐತಿಹಾಸಿಕ ಕಲಕತ್ತಾ ಮೈದಾನದೊಳಗೆ ಪ್ರವೇಶಿಸಿ, ದೊಡ್ಡ ಬಹಿರಂಗ ಸಭೆಯಾಗಿ ಬದಲಾಗುತ್ತಲೇ ಕೇಳಲು ಇಂಪಾಗಿ, ಶ್ರಾವ್ಯವಾಗಿರುವ ಹಾಡು ಜೀವ ತುಳುಕಾಡಿಸುತ್ತಾ ಲೌಡ್‌ಸ್ಪೀಕರ್ ಮೂಲಕ

'ಕಮ್ಯುನಿಸ್ಟರು ನಾವು, ನಾವು ಕಮುನಿಸ್ಟರು
ಮಾರ್ಕ್ಸಿಸ್ಟರು ನಾವು ಲೆನಿನಿಸ್ಟರು'

ವೇದಿಕೆ ಮೇಲೆ 'ಅಖಿಲಭಾರತ ಪ್ರಜಾ ಪ್ರತಿಭಟನಾ ವೇದಿಕೆ (AIPRE) ಬ್ಯಾನರ್. ಸಂಜೆಯ ಸುಳಿಗಾಳಿಯಲ್ಲಿ ಕೆಂಪು ಧ್ವಜಗಳ ಪಟಪಟ. ಸಮಾವೇಶಗೊಂಡಿದ್ದ ಸಾವಿರಾರು ಮಂದಿ ಹಾಡಿಗೆ ತಮ್ಮ ಕೊರಳು ಬೆರೆಸಿದರು. ಗತಸ್ಮೃತಿಗಳು ಮತ್ತೊಂದು ಸಲ ಮನಸ್ಸಿನಲ್ಲಿ ಸುಳಿದವು. ಇಂಥದ್ದೇ ಬೇರೊಂದು ದಿನ. ಬೇರೊಂದೇ ಬಹಿರಂಗ ಸಭೆ....

**ಮೇ 1, 1969**

ಮೇ ದಿನ. ಅಂತರಾಷ್ಟ್ರೀಯ ಶ್ರಮಜೀವಿವರ್ಗ ದಿನ. ಶ್ರಾಮಿಕವರ್ಗ ತನ್ನ ಹೋರಾಟ ವಿಜಯೋತ್ಸವವನ್ನು ಆಚರಿಸಿಕೊಳ್ಳುವ ದಿನ. ಅಮರವೀರರಿಗೆ ವಂದನೆಗಳ ಅರ್ಪಿಸುವ ದಿನ. ಮನುಷ್ಯ ತನ್ನ ಮತ್ತೊಬ್ಬ ಮನುಷ್ಯ ಹತ್ತಿಕ್ಕುವುದಕ್ಕೆ ವಿರುದ್ಧವಾಗಿ ಹೋರಾಟವನ್ನು

# ದಾವಾನಲ

**ಶ್ರೀಕಾಕುಳಂ :**

ಪೆದಗೊತ್ತಿಲಿ, ಆಂಧ್ರಪ್ರದೇಶದ ಪಾರ್ವತಿಪುರಂನಲ್ಲಿನ ಒಂದು ಚಿಕ್ಕ ಆದಿವಾಸಿ ಗ್ರಾಮ. ಆ ಪ್ರಾಂತದ ಪಾಲಕ, ಬಡ್ಡಿ ವ್ಯಾಪಾರಿ, ಭೂಮಾಲೀಕ–ತಿಗಲ ನರಸಿಂಹಲು ದುಷ್ಟತನಕ್ಕೆ, ಕೆಟ್ಟಕೆಲಸಗಳಿಗೆ ಹೆಸರು ಹೊತ್ತವನು.

ಆದರೆ 1968, ನವಂಬರ್ 25 ರಂದು ಬೇರೊಂದು ವಾತಾವರಣ ನೆಲೆಗೊಂಡಿತು. ಅದು ಉತ್ಸಾಹಭರಿತ ವಾತಾವರಣ. ಆ ದಿನದಂದು, ತಮ್ಮ ಸಾಂಪ್ರದಾಯಿಕ ಬಿಲ್ಲು ಬಾಣಗಳೊಂದಿಗೆ ಶಸ್ತ್ರಧಾರಿಗಳಾದ 250 ಜನ ಗಿರಿಜನ ಆದಿವಾಸಿಗಳು ನರಸಿಂಹಲು ಮನೆ ಮೇಲೆ ದಾಳಿ ಮಾಡಿದರು. ಆತನು ಅಕ್ರಮವಾಗಿ ಸಂಗ್ರಹಿಸಿಟ್ಟ ಧಾನ್ಯವನ್ನು, 20,000 ರೂ.ಗಳ ಬೆಲೆಯುಳ್ಳ ಆಸ್ತಿಯನ್ನು ವಶಮಾಡಿಕೊಂಡರು. ಪ್ರಾಮಿಸರಿ ನೋಟುಗಳು, ಭೂಮಿಗಳ ಕ್ರಯವಿಕ್ರಯಗಳ ಡಾಕ್ಯುಮೆಂಟ್ಸ್‌ನಂಥ ನೂರಾರು ಪತ್ರಗಳನ್ನು ಸುಟ್ಟು ಹಾಕಿದರು. ಭೂಮಾಲೀಕನ ಆಡಳಿತವನ್ನು ಛಿದ್ರಛಿದ್ರ ಮಾಡಿದ ಗಿರಿಜನ ರೈತರು, ರಾತ್ರಿ ಹೊತ್ತು ಹೋಗುವವರೆಗೂ ಆನಂದೋತ್ಸಾಹವನ್ನು ಪ್ರದರ್ಶಿಸಿದರು. 'ತುಫಾನ್ ಆರಂಭವಾಯಿತು, ಕಾಲ ಬದಲಾಗುತ್ತಿದೆ' ಎಂದು ಹಾಡುಗಳ ಹಾಡಿದರು. ರಾತ್ರಿ ಎಲ್ಲಾ ಸಂಗೀತ ಪ್ರತಿಧ್ವನಿಸುತ್ತಲೇ ಇದ್ದಿತು. ಮಾವೋ ಅಂದಂತೆ ಅದು 'ಪ್ರಜೆಗಳ ಹಬ್ಬ'.

ಆಂಧ್ರಪ್ರದೇಶದಲ್ಲಿ, ಈಶಾನ್ಯ ಮೂಲೆಯಲ್ಲಿರುವ ಶ್ರೀಕಾಕುಳಂ ಜಿಲ್ಲೆಯಲ್ಲಿನ ಪಾರ್ವತೀಪುರಂ ಏರಿಯಾದಲ್ಲಿನ ಗಿರಿಜನ ಪ್ರದೇಶಗಳು ಸರಿಯಾಗಿ ವರ್ಷದ ಕೆಳಗಿನಿಂದಲೇ ಪರಿವರ್ತನೆ ಹೊಂದಲು ಪ್ರಾರಂಭವಾಯಿತು. ಆ ಪ್ರಾಂತದಲ್ಲಿನ ಸಿಪಿಎಂ ಮುಖಂಡರು, ಇಬ್ಬರು ಉಪಾಧ್ಯಾಯರು, ಗಿರಿಜನರಿಂದ ಪ್ರೀತಿಯಿಂದ 'ದೊಡ್ಡ ಮಾಸ್ಟರು' ಎಂದು ಕರೆಯಲ್ಪಟ್ಟ ವೆಂಕಟಪ್ಪ ಸತ್ಯನಾರಾಯಣ ಅವರಲ್ಲಿ ಒಬ್ಬರು. ಎರಡನೆಯವರು ಆದಿಭಟ್ಲ ಕೈಲಾಸಂ, ನಕ್ಸಲ್ಬರಿ ಆಂದೋಲನ ಆರಂಭವಾಗುವ ಕಾಲಕ್ಕೆ, ಅವರಿಬ್ಬರೂ ಆ ಪ್ರಾಂತದಲ್ಲಿ ಗಿರಿಜನರ ಮಿಲಿಟೆಂಟ್ ಹೋರಾಟಗಳಿಗೆ ನಾಯಕತ್ವ ವಹಿಸುತ್ತಿದ್ದರು. ಅವರಿಬ್ಬರೂ ನಕ್ಸಲ್ಬರಿ ಸಿದ್ಧಾಂತವನ್ನು ಸಮರ್ಥಿಸಿದರು.

ಅದಕ್ಕೆ ಮುನ್ನ ಜರುಗಿದ ಆಂದೋಲನಗಳ ಪರಿಣಾಮವಾಗಿ ಕೂಲಿಗಳ ಸಂಬಳಗಳು ಹೆಚ್ಚಿದವು. ಗೇಣಿದಾರರಿಗೆ ಬೆಳೆಯಲ್ಲಿ ಹೆಚ್ಚಿನ ಪಾಲು ದೊರಕಿತು.

# ವಿಮುಕ್ತಿ ಮಾರ್ಗ

ವಾಸ್ತವವಾಗಿ ನಕ್ಸಲ್ಬರಿ, ಶ್ರೀಕಾಕುಳಂ ಮುಷಾಹರಿ, ಲಖಿಂಪೂರ್–ಖೇರಿಗಳು ವಿಶಾಲ ಗ್ರಾಮೀಣ ಭಾರತದಲ್ಲಿ ನೆಲೆಗೊಂಡಿರುವ ಪರಿಸ್ಥಿತಿಗಳ ಪ್ರತಿಬಿಂಬಗಳು.

## ಗ್ರಾಮೀಣ ಬಡವರು

ನಕ್ಸಲ್ಬರಿಯನ್ನೇ ತೆಗೆದುಕೊಳ್ಳಿ. ಅದು ಪಶ್ಚಿಮ ಬೆಂಗಾಲ್ ರಾಜ್ಯದಲ್ಲಿ, ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಸಿಲಿಗುರಿ ಸಬ್ ಡಿವಿಜನ್‌ನಲ್ಲಿನ ಒಂದು ಭಾಗ. ಆ ಗ್ರಾಮ ಹಿಮಾಲಯ ಪರ್ವತದ ಅಡಿಯಲ್ಲಿದೆ. ಪ್ರಾಂತವೆಲ್ಲಾ ಬೆಟ್ಟಗಳು, ತೆಳ್ಳನೆ ಅಡವಿ, ಜನಸಂಖ್ಯೆ ಪ್ರಧಾನವಾಗಿ ಸಂಥಾಲ್, ಓರಾನ್, ರಾಜವಂಶಿ ಬುಡಕಟ್ಟುಗಳಿಗೆ ಸೇರಿದ ಗಿರಿಜನರೆ. ಭೂಮಿಯನ್ನು ಕಾಂಟ್ರಾಕ್ಟ್ ಪದ್ಧತಿಯಾಗಿ ಉತ್ತುಕೊಳ್ಳುವ 'ಅಧಿಯಾರ್' ಬುಡಕಟ್ಟಿಗೆ ಸೇರಿದ ಗಿರಿಜನರು–ಎಲ್ಲರೂ ಸಣ್ಣ ಭೂಮಿ ಇಲ್ಲದ ರೈತರೇ. ಬಡತನದ ಅಂಚಿನಲ್ಲಿ ಬದುಕುತ್ತಿದ್ದಾರೆ.

ಶ್ರೀಕಾಕುಳಂ ಸಹಾ ಗಿರಿಜನ ಪ್ರಾಂತವೆ. ಸವರಮ್ ಜಾತಾಪು ಬುಡಕಟ್ಟುಗಳಿಗೆ ಸೇರಿದ ಗಿರಿಜನ ಜನಸಂಖ್ಯೆ. ದಟ್ಟವಾದ ಮರಗಳಿಂದ ಕೂಡಿದ ಬೆಟ್ಟದ ಪ್ರದೇಶ. ಒಣ ಬೇಸಾಯ, ಅಡವಿ ಉತ್ಪಾದನೆಗಳನ್ನು ಆರಿಸಿಕೊಳ್ಳುವುದು ಪ್ರಧಾನ ಜೀವನೋಪಾಯ. ಗಿರಿಜನರಲ್ಲಿ ಬಹುಸಂಖ್ಯಾತರು ಬಡ್ಡಿ ವ್ಯಾಪಾರಿಗಳಿಗೆ ಋಣಿಗಳಾಗಿರುತ್ತಾರೆ. ತಮಗಿರುವ ಸ್ವಲ್ಪ ಪ್ರಮಾಣದ ಭೂಮಿಯನ್ನು ಬಡ್ಡಿ ವ್ಯಾಪಾರಿಗಳಿಗೆ ಸ್ವಾಧೀನ ಮಾಡದೇ ತಪ್ಪದ ಪರಿಸ್ಥಿತಿ.

ಲಖಿಂಪೂರ್–ಖೇರಿ ಪ್ರಾಂತದ ರೈತರು ಸಹಾ ಗಿರಿಜನರೆ. ತೆರಾಯ್ ಬೆಟ್ಟದ ಕೆಳಗಿರುವ ಪ್ರಾಂತ ಸಿಲಿಗುರಿಗಿಂತ ದಟ್ಟವಾದ ಕಾಡುಗಳಿರುವ ಪ್ರದೇಶ. ಹೆಚ್ಚಿನ ಮಂದಿ ರೈತರು ವಲಸೆ ಬಂದವರು. ಧಾರೂಗಳು, ರಸಿಕ್ಕರು–ಇತರರು. ಕಾಡಿನಲ್ಲಿನ ಸ್ವಲ್ಪ ಪ್ರದೇಶವನ್ನು ಸ್ವಚ್ಛ ಮಾಡಿಕೊಂಡು, ವಿವಿಧ ಸರ್ಕಾರೀ ಯೋಜನೆಗಳಡಿ ಅಲ್ಲಿ ನಿವಾಸ ಏರ್ಪಡಿಸಿಕೊಂಡವರು. ಆದರೆ 1967ರ ಕಾಲಕ್ಕೆಲ್ಲಾ ರಾಜಕೀಯ ಮುಖಂಡರ ಬೆಂಬಲದೊಂದಿಗೆ, ಭೂಮಾಲೀಕರು ಅವರ ಭೂಮಿಗಳನ್ನು ಸ್ವಾಧೀನ ಮಾಡಿಕೊಂಡರು. ಭೂಮಾಲೀಕರುಗಳಲ್ಲಿ ಬಹುಮಂದಿಗೆ ಪ್ರಸ್ತುತ 500–2000 ಎಕರೆಗಳ ಭೂಮಿಗಳಿದ್ದಾವೆ.

ಶೋಷಕರಿಗೆ ವಿರುದ್ಧವಾಗಿ ಸಾಯುಧ ಹೋರಾಟಗಳನ್ನು ನಿರ್ವಹಿಸಿದ

# ಭಾರತ ಕಮ್ಯುನಿಸ್ಟರು

1917 ಅಕ್ಟೋಬರ್‌ನಲ್ಲಿ ರಷ್ಯನ್ ಕ್ರಾಂತಿ ವಿಜಯ ಜಗತ್ತಿನಾದ್ಯಂತ ಕಮ್ಯುನಿಸಂನತ್ತ ವಿಸ್ತೃತವಾದ ಆಸಕ್ತಿಯನ್ನು ಸೃಷ್ಟಿಸಿತು. ಭಾರತದೇಶದಲ್ಲಿನ ವಿವಿಧ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ದಳಗಳು ಏರ್ಪಟ್ಟವು. ಇವುಗಳಲ್ಲಿ ಬಹಳಷ್ಟಕ್ಕೆ ಮೂಲಗಳು 20ನೇ ಶತಮಾನದ ಮೊದಲ ಎರಡು ದಶಕಗಳಲ್ಲಿ ಸಕ್ರಿಯವಾಗಿದ್ದ ಅನುಶೀಲನ ಸಮಿತಿ, ಯುಗಾಂತರ್‌ನಂಥ ಬ್ರಿಟಿಷ್ ವಿರೋಧಿ ಟೆರರಿಸ್ಟ್ ತಂಡಗಳಲ್ಲಿವೆ. 1925 ರಲ್ಲಿ ಈ ತಂಡಗಳೆಲ್ಲಾ ಸೇರಿ, ಕಾನ್‌ಪುರದಲ್ಲಿ ಭಾರತ ಕಮ್ಯುನಿಸ್ಟ್ ಪಾರ್ಟಿ, ಮೊದಲ ಅಖಿಲ ಭಾರತ ಕಾಂಗ್ರೆಸನ್ನು ನಿರ್ವಹಿಸಿದವು.

ಭಾರತ ರಾಜಕೀಯಗಳಲ್ಲಿ ಅದೊಂದು ಪ್ರಮುಖವಾದ ಬದಲಾವಣೆ. ಕಾಂಗ್ರೆಸ್ ಪಾರ್ಟಿ ಭಾರತದೇಶಕ್ಕೆ ಕೇವಲ ಅಧಿವೇಶನ ಸ್ಥಾನವನ್ನು ಡಿಮ್ಯಾಂಡ್ ಮಾಡುತ್ತಿದ್ದ ಸಮಯದಲ್ಲಿ, 1925 ರಲ್ಲಿ ಭಾ.ಕ.ಪಾರ್ಟಿ ಸಂಪೂರ್ಣ ಸ್ವಾತಂತ್ರ್ಯಕ್ಕೆ ಸರಿಯಾದ ಕರೆಯನ್ನು ನೀಡಿತು. ಆದರೆ ಕಾಂಗ್ರೆಸ್ ಪಾರ್ಟಿ ಸಹಾ 'ಸಂಪೂರ್ಣ ಸ್ವರಾಜ್ಯ ತನ್ನ ಗುರಿ' ಎಂದು ಘೋಷಿಸಿಕೊಂಡ ಬಳಿಕ ಭಾ.ಕ.ಪಾ. ಅದರ ಹಿಂದೆ ಬಿದ್ದು ಹೋಗಿ, ತನ್ನ ಸ್ವಂತ ಕಾರ್ಯಾಚರಣೆಯಿಂದ ಭಾರತ ಕಾರ್ಮಿಕವರ್ಗದಲ್ಲೂ, ರೈತಾಂಗದಲ್ಲೂ ಸ್ವತಂತ್ರ ಪ್ರಜಾಬುನಾದಿಯನ್ನು ನಿರ್ಮಿಸಿಕೊಳ್ಳುವುದರಲ್ಲಿ ಸೋತಿತು. ಗಾಂಧಿ ಪ್ರತಿಪಾದಿಸಿದ 'ಅಹಿಂಸೆ' 'ಸತ್ಯಾಗ್ರಹಗಳು' ಕೇವಲ ಕಾರ್ಮಿಕ ವರ್ಗವನ್ನು, ರೈತಾಂಗವನ್ನು, ವಿದ್ಯಾರ್ಥಿಗಳನ್ನು ಕ್ರಿಯಾಶೀಲ ಹೋರಾಟಗಳಿಂದ ದಾರಿ ತಿರುಗಿಸುವ ತಂತ್ರಗಳೆಂದು, ಬ್ರಿಟಿಷ್ ದೊರೆಗಳಿಗೆ ಎಂತಹಾ ತೀವ್ರ ಅಪಾಯವನ್ನು ಉಂಟಾಗಿಸದೇ ಅವರು ಭಾರತ ಬಂಡವಾಳಶಾಹಿಗಳಿಗೆ ರಿಯಾಯಿತಿಗಳ ಕಲ್ಪಿಸುವಂತೆ ಒತ್ತಡ ತರುವುದಕ್ಕೆ ಸಾಧನಗಳೆಂದು ಸಾಬೀತು ಮಾಡುವುದಕ್ಕೆ ಅಸಂಖ್ಯ ಉದಾಹರಣೆಗಳು ಇದ್ದಾಗ್ಯೂ, ಕಮ್ಯುನಿಸ್ಟರು ಕಾಂಗ್ರೆಸ್ ನಾಯಕತ್ವದ ರಾಜಿಯಾಗುವ ಸ್ವಭಾವವನ್ನು ಗುರ್ತಿಸಲಾರದೇ ಹೋದರು.

ಯಾವ ಕ್ರಾಂತಿಪಕ್ಷವಾದರೂ ಮೂರು ಪ್ರಮುಖ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರಗಳ ಕೊಡಬೇಕಾಗಿದೆ. ತಮ್ಮ ವಿಮುಕ್ತಿ ಹೋರಾಟದಲ್ಲಿ ಶ್ರಮಜೀವಿಗಳಿಗೆ ಮಿತ್ರರು ಯಾರು? ಅಧಿಕಾರ ಸೂತ್ರಗಳನ್ನು ಕೈಗೊಂಡಿರುವವರ ಶತ್ರು ಯಾರು? ಅವರಿಂದ ಅಧಿಕಾರವನ್ನು ದಕ್ಕಿಸಿಕೊಳ್ಳುವುದಕ್ಕೆ ಕ್ರಾಂತಿಕಾರಿ ವರ್ಗಗಳು ಅನುಸರಿಸಬೇಕಾದ ಸಿದ್ಧಾಂತ ಯಾವುದು?

# ವಿಪ್ಲವ ಪಾರ್ಟಿ

ತನ್ನ 'ಎಂಟನೇ ಡಾಕ್ಯುಮೆಂಟ್ಸ್' ಬರೆಯುವಾಗ ಮಜುಂದಾರ್‌ಗೆ ತಾನು ಕಾರ್ಯದರ್ಶಿಯಾಗಿರುವ ಡಾರ್ಜಿಲಿಂಗ್ ಜಿಲ್ಲಾ ಕಮಿಟಿ ಸದಸ್ಯರೆಲ್ಲರ ಬೆಂಬಲ ಇತ್ತು. ಕಾನೂ ಸನ್ಯಾಲ್, ಜಂಗಲ್‌ಸಂತಾಲ್ ಮತ್ತಿತರರು ಆತನ ಭಾವಗಳನ್ನು ಉತ್ಸಾಹದಿಂದ ಸಮರ್ಥಿಸುವುದಲ್ಲದೇ, ನಕ್ಸಲ್ಬರಿಯಲ್ಲಿ ಆಚರಣೆಯಲ್ಲಿ ಇಡುವುದರಲ್ಲಿ ಸಹಾ ಆತನಿಗೆ ಸಹಾಯ ಮಾಡಿದರು. ಈಗ ಅಲ್ಲಿ ರೈತಾಂಗ ಆಂದೋಲನ ಪ್ರಾರಂಭ ಆಗುವುದರಲ್ಲಿ ಆತನ ಭಾವಗಳಿಗೆ ದೇಶಾದ್ಯಂತ ಸಿಪಿಎಂನೊಳಗೆ ಬೆಂಬಲ ದೊರಕಿತು. ರಾಜ್ಯದಲ್ಲಿನ ಇತರ ಪ್ರಾಂತಗಳಲ್ಲಿ ವಿವಿಧ ಜಿಲ್ಲಾ ಕಮಿಟಿಗಳಲ್ಲಿ ನಾಯಕತ್ವದ ಸ್ಥಾನಗಳಲ್ಲಿರುವವರು, ಕೆಲವರು ರಾಜ್ಯಕಮಿಟಿ ಸದಸ್ಯರು ಕೂಡಾ 'ನಕ್ಸಲ್ಬರಿ ಕ್ರಿಷಕ್ ಸಂಗ್ರಾಂ ಸಹಾಯಕ ಸಮಿತಿ' ಯಲ್ಲಿ ನಾಯಕರಾದರು. ಇವರಲ್ಲಿ ಸುಶೀತಲ್ ರಾಯ್ ಚೌಧರಿ, ಸರೋಜ್‌ದತ್ತಾ, ಪರಿಮಳ್ ದಾಸ್‌ಗುಪ್ತಾ ಮತ್ತಿತರರು ಇದ್ದಾರೆ. ವಿದ್ಯಾರ್ಥಿ ಆಂದೋಲನದಲ್ಲಿ ಸಹಾ ನಾಯಕತ್ವದತ್ತ ವಿರೋಧ ಉಕ್ಕೇರಿತು.

### ಸಿ.ಪಿ.ಎಂ ನಲ್ಲಿ ಪ್ರತಿಭಟನೆ

ಚಾರು ಮಜುಂದಾರ್ ಸಿದ್ಧಾಂತಕ್ಕೆ ದೇಶದಲ್ಲಿನ ಇತರ ಪ್ರಾಂತಗಳಲ್ಲಿ ಸಹಾ ವಿಸ್ತಾರವಾದ ಬೆಂಬಲ ಲಭಿಸಿತು. ಬಿಹಾರ್, ಆಂಧ್ರಪ್ರದೇಶ್, ಉತ್ತರ ಪ್ರದೇಶ್, ಕೇರಳ, ತಮಿಳುನಾಡು, ಪಂಜಾಬ್, ಕಾಶ್ಮೀರ್ ಪ್ರಾಂತಗಳಲ್ಲಿ ಸಿಪಿಎಂ ನಾಯಕತ್ವದ ಮೇಲೆ ಬಹಿರಂಗ ಪ್ರತಿಭಟನೆ ಆರಂಭವಾದವು. ಆನಂತರ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ 10,000 ಮಂದಿಗೂ ಹೆಚ್ಚಾಗಿ ಕಾರ್ಯಕರ್ತರು ಪಾರ್ಟಿಯನ್ನು ಬಿಟ್ಟುಬಿಟ್ಟರು.

1967 ನವಂಬರ್‌ನಲ್ಲಿ ನಡೆದ ಇಂತಹಾ ವಿವಿಧ ತಂಡಗಳ ಪ್ರತಿನಿಧಿಗಳ ಸಮಾವೇಶದಲ್ಲಿ, ಸಿಪಿಎಂ ನಲ್ಲಿ ಅಖಿಲಭಾರತ ಕ್ರಾಂತಿಕಾರಿಗಳ ಸಮನ್ವಯ ಸಮಿತಿ ಏರ್ಪಟ್ಟಿತು. ರೈತಾಂಗ ಹೋರಾಟಗಳು ಜರುಗುತ್ತಿರುವ ವಿವಿಧ ಪ್ರಾಂತಗಳ ನಡುವೆ ಸಂಬಂಧಗಳನ್ನು ಹೇಗೆ ಏರ್ಪಡಿಸಬೇಕೆನ್ನುವ ಅಂಶದ ಮೇಲೆ ಈ ಸಮಿತಿ ಚರ್ಚಿಸಿತು. ಇಂಗ್ಲಿಷ್‌ನಲ್ಲಿ 'ಲಿಬರೇಶನ್' ಪತ್ರಿಕೆಯನ್ನು, ಬೆಂಗಾಲಿಯಲ್ಲಿ 'ದೇಶಬ್ರತಿ' ಪತ್ರಿಕೆಯನ್ನು ಆರಂಭಿಸುವುದು ಅವು ತೆಗೆದುಕೊಂಡ ಮೊದಲ ಕ್ರಮಗಳಲ್ಲೊಂದು.

1968ನೇ ಕಾಲಕ್ಕೆ ಕ್ರಾಂತಿಕಾರಿಗಳು ಸಿಪಿಎಂನೊಂದಿಗೆ ಸಂಬಂಧಗಳನ್ನು

# 1970 ದಶಕವನ್ನು ವಿಮುಕ್ತಿ ದಶಕವನ್ನಾಗಿ ಬದಲಾಯಿಸಿರಿ

## ಪಂಜಾಬ್

ಖತಂ ಕಾರ್ಯಕ್ರಮ ದೇಶದಲ್ಲೆಲ್ಲಾ ಹರಡಿತು. ಗೆರಿಲ್ಲಾ ದಳಗಳ ಕ್ರಮಗಳು ವಿಶೇಷವಾಗಿ ಜನಾಭಿಮಾನವನ್ನು ಸೂರೆಗೊಂಡ ರಾಜ್ಯಗಳಲ್ಲಿ ಪಂಜಾಬ್ ಒಂದು. ಪಾರ್ಟಿ ಮಹಾಸಭಾ ನಡೆಯುವುದಕ್ಕೆ ಕೆಲಕಾಲದ ಮುಂಚಿನಿಂದಲೇ ದೆಹಲಿಯಲ್ಲಿ ಓದಿಕೊಳ್ಳುತ್ತಿದ್ದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಬಹಳ ಮಂದಿ ಪಂಜಾಬ್, ಹರಿಯಾನ ಗ್ರಾಮೀಣ ಪ್ರಾಂತಗಳಲ್ಲಿ ಕೆಲ್ಸ ಮಾಡ್ತಿದಾರೆ. ರೈತರ ಮೊದಲ ಉತ್ಸಾಹಕ್ಕೆ ಭಾರೀ ವೇಗ ಸಿಕ್ಕಿತು. 1970 ಆಗಸ್ಟ್‌ನಲ್ಲಿ ಬಸಂತ್‌ಸಿಂಗ್ ಎಂಬ ಸ್ವತಂತ್ರಪಾರ್ಟಿ ಎಂಎಲ್‌ಎ ದಳದ ಕ್ರಮಗಳಲ್ಲಿ ಕೊಲ್ಲಲ್ಪಟ್ಟ ಬಳಿಕ ತೀವ್ರವಾದ ಪೋಲೀಸ್ ನಿರ್ಬಂಧ ಆರಂಭವಾಯಿತು. ಆ ನಿರ್ಬಂಧದಲ್ಲಿ ಕೂಡ ದಳದ ಸದಸ್ಯರು ಚುರುಕಾಗಿ ಕೆಲಸ ಮಾಡಿದರು. ಫಿರೋಜ್‌ಪೂರ್ ಜಿಲ್ಲಾ ಕೊಕ್ರಿಕಲನ್ ಗ್ರಾಮದಲ್ಲಿ ಸಮಿತಿ ಅಧ್ಯಕ್ಷ, ಅಕಾಲಿದಳ್ ನಾಯಕನೂ ಆದ ಒಬ್ಬ ದೊಡ್ಡ ಭೂಮಾಲೀಕನನ್ನು ಕೊಂದಿದ್ದು ವಿಶೇಷವಾಗಿ ಒಂದು ಮಹತ್ತರವಾದ ಕ್ರಮ. ಆ ಭೂಮಾಲೀಕ ಬ್ರಿಟಿಷರಿಗೆ ಹೆಸರಾಂತ ಏಜೆಂಟಾಗಿ ವ್ಯವಹರಿಸಿದವನು. 1931 ರಲ್ಲಿ ಗಲ್ಲಿಗೇರಿಸಲ್ಪಟ್ಟ ಕ್ರಾಂತಿಕಾರಿ ಹುತಾತ್ಮ ಭಗತ್‌ಸಿಂಗ್‌ಗೆ ವಿರುದ್ಧವಾಗಿ ಸಾಕ್ಷಿ ಹೇಳಿದ್ದಕ್ಕಾಗಿಯೂ ಆತನಿಗೆ ಬ್ರಿಟಿಷ್ ಸರ್ಕಾರ ಜಹಗೀರು ನೀಡಿತು. 1970 ಅಕ್ಟೋಬರ್, 1971 ಜನವರಿ ಮಧ್ಯಕಾಲದಲ್ಲಿ ಲೂಧಿಯಾನಾ, ಪಾಟಿಯಾಲಾ, ಸಂಗ್ರೂರ್, ಜಲಂಧರ್, ಹೋಷಿಯಾರ್‌ಪೂರ್, ಭಟಿಂಡಾ ಜಿಲ್ಲೆಗಳಲ್ಲಿನ ಗ್ರಾಮಗಳಲ್ಲಿ ಅನೇಕ ಮಂದಿ ಭೂಮಾಲೀಕರು, ಬಡ್ಡಿ ವ್ಯಾಪಾರಿಗಳು ಖತಂ ಮಾಡಲ್ಪಟ್ಟರು.

## ಬೀರ್ ಭೂಮ್

ರೈತಾಂಗ ಹೋರಾಟಗಳ ರಂಗಸ್ಥಳದ ಮೇಲಕ್ಕೆ 1970ರ ಕೊನೆಯಲ್ಲಿ ಪ್ರವೇಶಿಸಿದ ಮತ್ತೊಂದು ರೈತಾಂಗ ಹೋರಾಟ ಕೇಂದ್ರ ಬೀರ್‌ಭೂಮ್, ಇಲ್ಲಿ ಕೂಡಾ ರೈತಾಂಗವನ್ನು ಉತ್ತೇಜಿತರನ್ನಾಗಿಸುವುದರಲ್ಲಿ ಪ್ರಧಾನ ಪಾತ್ರ ವಹಿಸಿದ್ದು–ಭೋಲ್‌ಪೂರ್‌ನಲ್ಲಿನ ಶ್ರೀನಿಕೇತನ್ ಕೃಷಿ ಕಾಲೇಜ್ ವಿದ್ಯಾರ್ಥಿಗಳೆ. ಇಲ್ಲಿ ಸರಣಿಯಾಗಿ ನಡೆದ ಖತಂ

## ಜ್ವಲಿಸುವುದಕ್ಕೆ ಇದೇ ಸಮಯ

ಆದರೆ ಕ್ರಾಂತಿಜ್ವಾಲೆಗಳು ಬರ್ದ್ವಾನ್, ಮುರ್ಷಿದಾಬಾದ್, ಉತ್ತರ ಬೆಂಗಾಲ್‌ಗಳಲ್ಲಿ ಆರಂಭವಾಗಲಿಲ್ಲ. ಬೆಂಗಾಲ್‌ನಲ್ಲಿನ ವಿವಿಧ ಪ್ರಾಂತಗಳಲ್ಲಿ ಜರುಗಿದ ರೈತಾಂಗ ಚಳವಳಿಗಳ ಪ್ರಭಾವ ಅನೂಹ್ಯವಾಗಿ ಕಲಕತ್ತಾ ನಗರದ ಮೇಲೆ ಬಿದ್ದಿತು. ನಕ್ಸಲ್ಬರಿ ಆಂದೋಲನ ಆರಂಭವಾದ ಮೊದಲ ದಿನಗಳಲ್ಲಿ ಆ ನಗರದಲ್ಲಿನ ಕಾಲೇಜು ವಿದ್ಯಾರ್ಥಿಗಳು ಆ ಹೋರಾಟಕ್ಕೆ ವಿಸ್ತಾರವಾದ ಬೆಂಬಲವನ್ನು ಕೂಡಿಸಿದರು. ಆದರೆ ವಿದ್ಯಾರ್ಥಿಗಳು, ಯುವಕರು, ಗ್ರಾಮಗಳಿಗೆ ತೆರಳಿ ಬಡ, ಭೂಮಿ ಇಲ್ಲದ ರೈತಾಂಗದೊಂದಿಗೆ ಒಂದಾಗಬೇಕೆಂದು 1969 ರಲ್ಲಿ ಮಜುಂದಾರ್ ಕರೆ ನೀಡಿದ್ದರಿಂದ ಬಹಳ ಮಂದಿ ಕಾರ್ಯಕರ್ತರು ನಗರ ಕಾಲೇಜುಗಳನ್ನು ಬಿಟ್ಟು ಹಾಕಿ ಗ್ರಾಮೀಣ ಪ್ರಾಂತಗಳೊಳಗೆ ನುಗ್ಗಿಕೊಂಡು ಹೋದರು. ಅದಾಗ್ಯೂ ಕ್ರಮಬದ್ಧವಾಗಿ ಸಾಗಿದ ರಾಜಕೀಯ ಪ್ರಚಾರದ ಫಲವಾಗಿ ನಕ್ಸಲ್ಬರಿ ಸಂದೇಶ ನಗರದಲ್ಲಿ ಸಜೀವವಾಗಿ ನಿಂತುಹೋಯಿತು. ರಾಜ್ಯದಲ್ಲಿನ ವಿವಿಧ ಪ್ರಾಂತಗಳಲ್ಲಿ ಜರುಗುತ್ತಿರುವ ರೈತಾಂಗ ಕೃತ್ಯಗಳನ್ನು ಕೊಂಡಾಡುತ್ತಾ ಬರೆದ ಘೋಷಣೆಗಳು ನಗರದ ಗೋಡೆಗಳ ಮೇಲೆ ನಿತ್ಯಸಾಕ್ಷಾತ್ಕರಿಸುತ್ತಿದ್ದವು.

'1970 ರ ದಶಕವನ್ನು ವಿಮುಕ್ತಿ ದಶಕವನ್ನಾಗಿ ಬದಲಿಸಿ' ಎಂಬ ಅತ್ಯಂತ ಜನಪ್ರಿಯತೆ ಪಡೆದ ಸಂದೇಶ ನಗರದಲ್ಲಿನ ವಿವಿಧ ಪ್ರಾಂತಗಳಲ್ಲಿ ನಿದ್ರೆಯಿಂದೆದ್ದ ಜನರಿಗೆ ದರ್ಶನ ಕೊಡುತ್ತಾ ಇದ್ದವು.

### ವಸಾಹತು ಶಿಕ್ಷಣ ವಿಧಾನ

ಮೊದಲ ದಿನಗಳಲ್ಲಿ ಭಾ.ಕ.ಪಾ. (ಮಾ–ಲೆ) ಶಿಕ್ಷಣ ವ್ಯವಸ್ಥೆಯನ್ನು ತನ್ನ ಕಾರ್ಯಕ್ರಮಗಳಿಗೆ ಪ್ರಮುಖ ಲಕ್ಷ್ಯವನ್ನಾಗಿ ಆರಿಸಿಕೊಂಡಿತು. ಪಾರ್ಟಿ ವಿಶ್ವವಿದ್ಯಾಲಯ ಶಾಖೆ ಹಾಕಿದ ಒಂದು ಕರಪತ್ರದಲ್ಲಿ ಹೀಗೆ ಹೇಳಿಕೊಂಡರು. 'ಪ್ರಗತಿ ವಿರೋಧಿಗಳು ರೂಪಿಸಿದ ಶಿಕ್ಷಣ ವಿಧಾನ ಮೌಲಿಕವಾಗಿ ವಸಾಹತು ಶಿಕ್ಷಣ ವಿಧಾನ. ಕಳೆದ 22 ವರ್ಷಗಳಿಂದ ಈ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳಿಗೆ, ಯುವಕರಿಗೆ ಒಳ್ಳೆ ಉದ್ಯೋಗಗಳ ಸಂಪಾದಿಸಿಕೊಳ್ಳುವುದು ಎಂಬ ಔಷಧವನ್ನು ಹತ್ತಿಸಿದೆ. ಅವರು ಬಡರೈತರ ಪರವಹಿಸಿ ವಿಪ್ಲವ ಸಮರದಲ್ಲಿ ಪಾಲ್ಗೊಳ್ಳದಂತೆ ನಿರ್ಬಂಧಿಸಿದೆ.'

# ಉಕ್ಕುಪಾದ

ಮೊದಲು ಜರುಗಿದ ಕೆಲವು ಕೃತ್ಯಗಳ ನಂತರ ಪೊಲೀಸರು ಯೋಜನಾಬದ್ಧವಾಗಿ ಪಾಶವಿಕವಾಗಿ ಪ್ರತಿಕ್ರಿಯಿಸಿದರು. ಅದರ ಪರಿಣಾಮವಾಗಿ ಜರುಗಿದ ಹಿಂಸಾತ್ಮಕ ಪ್ರತಿಕ್ರಿಯೆಗಳಿಗೆ ಅವರೇ ಜವಾಬ್ದಾರರು. ನಕ್ಸಲೈಟ್ ಯುವಕರ ಮೇಲೆ  ದಾಳಿಗಳು ಆರಂಭವಾಗಿದ್ದರಿಂದ ವಿಪ್ಲವ ಬೇಗಬೇಗನೆ ಬಂದು ಬಿಡುತ್ತದೆ ಅಂದುಕೊಂಡವರ ಕನಸುಗಳು ರಕ್ತದಲ್ಲಿ ಮುಳುಗಿಹೋದವು. ಆಯಾ ಪ್ರಾಂತಗಳಲ್ಲಿ ಹೆಸರು ಹೊತ್ತ ಗೂಂಡಾಗಳಾದ ಕಾಂಗ್ರೆಸ್, ಸಿಪಿಎಂ ಕಾರ್ಯಕರ್ತರು ಪೊಲೀಸರಿಗೆ ಸಹಾಯ ಮಾಡಿದರು. ಈ ಕೆಳಗೆ ಹೇಳಿದ ಕೆಲವು ಆಯ್ಕೆ ಮಾಡಿದ ವರದಿಗಳು ಅವರ ಪಾಶವಿಕ ನಿರ್ದಯತೆಗೆ ಸೂಚಕಗಳು.

ಒಬ್ಬ ಪ್ರಸಿದ್ಧ ನಕ್ಸಲೈಟ್ ನಾಯಕನ ದಾರುಣ ಕೊಲೆ ಕುರಿತು ಓರ್ವ ಪತ್ರಿಕಾ ವರದಿಗಾರ ಹೀಗೆ ಬರೆದರು. 'ಉತ್ತರ ಕಲಕತ್ತಾದಲ್ಲಿನ ಮಸೀದ್ ಭೂರಿ ಬೀದಿಯಲ್ಲಿ ಬುಧವಾರದಂದು ಕಾಳಿಪೂಜಾ ಉತ್ಸವ ನಡೆಯುತ್ತಿರುವಾಗ ಪೊಲೀಸರು, ಎಲ್ಲರಿಗೆ ಚಿರಪರಿಚಿತರಾದ 22 ವರ್ಷಗಳ ನಕ್ಸಲೈಟ್ ನಾಯಕ ವೀರೇಂದ್ರ ದೇವನಾಥನನ್ನು ಕರಾಳವಾಗಿ ಕೊಲೆ ಮಾಡಿದರು. ಮೈಕಲ್ಲಿ ಒಂದು ಘೋಷಣೆ ಕೇಳಿಬರುತ್ತಿದ್ದ ವೇಳೆಯಲ್ಲಿ ದೇವನಾಥನು ಕುರ್ಚಿಯಲ್ಲಿ ಕುಳಿತು ಉತ್ಸವಾನ ನೋಡ್ತಿದಾನೆ ಎಂದು, ಚಪ್ಪರದೊಳಗೆ ಬಂದ ಪೊಲೀಸರು ಅತಿ ಹತ್ತಿರದಿಂದ ಆತನ ಮೇಲೆ ಗೋಲಿಬಾರ್ ನಡೆಸಿದರು ಎಂದು, ಆ ಕುರ್ಚಿಯಲ್ಲೇ ಆತ ಕುಸಿದು ಬಿದ್ದು ಹೋದ ಎಂದು ಪ್ರತ್ಯಕ್ಷ ಸಾಕ್ಷಿಗಳು ಮುಕ್ತಕಂಠದಿಂದ ಹೇಳಿದರು.'

ವಿಸ್ತೃತ ಮಟ್ಟದಲ್ಲಿ ಜಾರಿಗೊಳಿಸಲ್ಪಟ್ಟ ಭಯೋತ್ಪಾದಕತನವನ್ನು ಮತ್ತೊಬ್ಬರು ಹೀಗೆ ವರ್ಣಿಸಿದರು. 'ನವಂಬರ್ 12 ರ ರಾತ್ರಿ ತುಂಬಾ ಹೊತ್ತು ಹೋದ ಬಳಿಕ ಒಂದು ದೊಡ್ಡ ಸಶಸ್ತ್ರ ಪೊಲೀಸ್ ತಂಡ ಬೆಲಿಯಾ ಘಾಟ್ ಬಳಿ ಇರುವ ಸಿ.ಇ.ಟಿ. ಭವನವನ್ನು ಸುತ್ತುವರಿದು ಪ್ರಾಂಗಣದೊಳಗಿನ 556 ಫ್ಲಾಟ್‌ಗಳಲ್ಲಿ ಪ್ರತಿಯೊಂದನ್ನು ತನಿಖೆ ಮಾಡಿದರು. ಸುಮಾರು 100 ಜನ ಯುವಕರನ್ನು ಅರೆಸ್ಟ್ ಮಾಡಿದರು. ಅದರೊಳಗಿಂದ ನಾಲ್ವರನ್ನು ಏಕಾಂತವಾಗಿದ್ದ ಒಂದು ಪ್ರದೇಶದೊಳಗೆ ಕರೆದುಕೊಂಡು ಹೋಗಿ ಸಾಲಾಗಿ ನಿಲ್ಲಿಸಿ ಗುಂಡುಗಳ ಮಳೆ ಸುರಿಸಿದರು.'

ಇಂತಹ ಕಾನೂನು ವಿರೋಧಿ ಕೃತ್ಯಗಳಿಗೆ ಮುಂದಾಗುವುದಕ್ಕೆ ಪೊಲೀಸರಿಗೆ

# ಎರಡನೇ ಭಾಗ (1972–1977)

ಅವರು ಹೂವುಗಳೆಲ್ಲವನ್ನು ಕಿತ್ತುಹಾಕಬಲ್ಲರಾಗಲೀ ವಸಂತವನ್ನು ತಡೆಯಲಾರರು.

## ಹಿನ್ನಡೆ–ಪುನರ್‌ನಿರ್ಮಾಣ

ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್–ಲೆನಿನಿಸ್ಟ್) ಇತಿಹಾಸದಲ್ಲಿ ಒಂದು ಕತ್ತಲ ಯುಗ ಈಗ ಆರಂಭವಾಯಿತು. 1972–77 ವರ್ಷಗಳು ಕಮ್ಯುನಿಸ್ಟ್ ಕ್ರಾಂತಿಕಾರಿಗಳಿಗೆ ನಿರಾಶಾದಾಯಕವಾದವು. ಪಾರ್ಟಿ ನಾಯಕತ್ವ ಛಿದ್ರಛಿದ್ರವಾಯಿತು. ಸಾವಿರಾರು ಮಂದಿ ಕಾರ್ಯಕರ್ತರು ಜೈಲಿನಲ್ಲಿದ್ದರು. ಜೈಲುಗಳ ಹೊರಗೆ ಇರುವವರು ತಪ್ಪಿಸಿಕೊಂಡು ತಿರುಗಬೇಕಾದ ಪರಿಸ್ಥಿತಿ. ಅವರ ಪ್ರಜಾ ಬುನಾದಿ ಕುಸಿದು ಬಿದ್ದು ಹೋಯಿತು. ಅವರಲ್ಲಿ ಬಹುಮಂದಿಗೆ ಬದುಕೇ ಒಂದು ಸಮಸ್ಯೆಯಾಯಿತು.

ಬಲವಾದ ನಿರ್ಮಾಣ, ಸರಿಯಾದ ಮಾರ್ಗದರ್ಶಕತ್ವ ಇಲ್ದೆ ಹೋಗುವುದರಿಂದ ಮಜುಂದಾರ್ ಊಹಿಸಿದ 'ದೇಶವ್ಯಾಪಿ ಪ್ರತಿಭಟನೆ, ಆಕಸ್ಮಿಕ ವಿಸ್ಫೋಟಗಳ' ಪ್ರಯೋಜನವನ್ನು ಅವರು ಹೊಂದಲಾಗದೇ ಹೋದರು.

## ದೇಶವ್ಯಾಪೀ ಪ್ರತಿಭಟನೆ

ವಿರೋಧದ ಹೊನಲು ದೇಶವನ್ನು ಮುಳುಗಿಸಿ ಎತ್ತಿತು. ಭ್ರಷ್ಟಾಚಾರಕ್ಕೆ, ಸರ್ಕಾರದ ಬೇಜವಾಬ್ದಾರಿಗೆ ವಿರುದ್ಧವಾಗಿ ಬಿಹಾರ್, ಗುಜರಾತ್‌ಗಳಲ್ಲಿ ತೀವ್ರವಾದ ವಿದ್ಯಾರ್ಥಿ ಚಳವಳಿಗಳು ನಡೆದವು. ತೀವ್ರವಾದ ಕ್ಷಾಮ ಪರಿಸ್ಥಿತಿಗಳ ಕಾರಣದಿಂದ ಮಹಾರಾಷ್ಟ್ರದಲ್ಲಿನ ಗ್ರಾಮೀಣ ಪ್ರಾಂತಗಳಲ್ಲಿ ಅಶಾಂತಿ, ಆಂದೋಲನ ಜ್ವಲಿಸಿದವು. ನಗರಗಳಲ್ಲಿ, ವಿಶೇಷವಾಗಿ ಬೊಂಬಾಯಿನಲ್ಲಿ ಮಹಿಳೆಯರು ದಿನದಿನಕ್ಕೆ ಹೆಚ್ಚುತ್ತಿದ್ದ ದರಗಳಿಗೆ ವಿರುದ್ಧವಾಗಿ ಪ್ರತಿಭಟನೆ ಆರಂಭಿಸಿದವು.

ಆಡಳಿತ ವರ್ಗ ಗೊಂದಲದಲ್ಲಿ ಬಿದ್ದಿತು. ಜನರ ಕ್ರೋಧಾಗ್ನಿಯನ್ನು ಅವರು ತಣ್ಣಗಾಗಿಸಲಾರದೇ ಹೋದರು. ಪ್ರತಿದಿನ ವ್ಯವಸ್ಥೆ ಮೇಲೆ ಮತ್ತೊಂದು ದಾಳಿಗೆ ಸಂಬಂಧಿಸಿದ ತಾಜಾಸುದ್ದಿಗಳು ಬರುತ್ತಿವೆ. ಅದಾಗ್ಯೂ ಒಂದು ವ್ಯವಸ್ಥಿತವಾದ ವಿಪ್ಲವ ಪಾರ್ಟಿ ಜಾಗೃತವಾಗಿ ಮಧ್ಯಸ್ಥಿಕೆ ಮಾಡಿಕೊಳ್ಳಲಾಗದೇ ಹೋಗಿದ್ದರ ಕಾರಣದಿಂದ ಜನರು ಎಸೆದ ಆಕಸ್ಮಿಕ ಸವಾಲನ್ನು ಮತ್ತೊಂದು ಸಲ ಪಾರ್ಲಿಮೆಂಟರಿ ದಾರಿ

# ಮೂರನೇ ಭಾಗ (1977–1992)

ಕಾಲ ಮುನ್ನಡೆಯುತ್ತದೆ–ನಿಲ್ಲದು
ಕ್ರಾಂತಿಜ್ವಲಿಸುತ್ತದೆ–ಸಾಯದು
ಚಳವಳಿಯ ನೆಲಕೂಸು
ಬೆಳೆದು ದೊಡ್ಡವನಾಗಿ
ಹೊಸಜೀವನ ಮಹಾಕಾವ್ಯವನ್ನು
ರಚಿಸುತ್ತಾನೆ–ಖಂಡಿತ.

**ಉಳುವವನಿಗೆ ಭೂಮಿ–ರೈತಾಂಗ ಕಮಿಟಿಗೇ ಸರ್ವಾಧಿಕಾರಗಳು–ಗಯಾ–ಔರಂಗಾಬಾದ್**

1980 ಫೆಬ್ರವರಿ 4, ಹಜಾರಿಬಾಗ್–ಗಿರ್ಡ್ ಪ್ರದೇಶವೆಲ್ಲಾ ಆ ಸುದ್ದಿ ತುಫಾನ್‌ನಂತೆ ಹರಡಿತು. ಕಾಮ್ರೇಡ್ ಜೀವಲಾಲ್ ಮೆಹತೋ ಮತ್ತಿನ್ನಿಲ್ಲ. ರೈತಾಂಗವನ್ನು ಪ್ರೋತ್ಸಾಹಿಸಿ ಮಾರ್ಗದರ್ಶಕತ್ವ ವಹಿಸಿ ಭೂಮಾಲೀಕರಿಗೆ ವಿರುದ್ಧವಾಗಿ ಸಾಗಿದ ಹೋರಾಟಗಳಿಗೆ ನಾಯಕತ್ವ ವಹಿಸಿದ ವ್ಯಕ್ತಿ ಕೊಲೆ ಮಾಡಲ್ಪಟ್ಟರು. ಭೂಮಾಲೀಕ ಗೂಂಡಾಗಳು ಆತನನ್ನು ಕಿಡ್ನಾಪ್ ಮಾಡಲು, ಪೊಲೀಸರು ಥಳಿಸಿ ಕೊಂದರು.

ಜೀವಲಾಲ್, ಗೊಮಿಯಾ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿನ ಕರಿರಿ ಹಳ್ಳಿಯಲ್ಲಿ ಒಂದು ಬಡರೈತ ಕುಟುಂಬದಲ್ಲಿ 1935 ರಲ್ಲಿ ಜನಿಸಿದರು. ಆರ್ಥಿಕ ದರೋಡೆಗೆ, ಸಾಮಾಜಿಕ ದಮನಕ್ಕೆ ಗುರಿಯಾದ ಆತ ಸಿಪಿಐ ಹೋರಾಟಗಳತ್ತ ಆಕರ್ಷಿತರಾದರು. ಆ ಪ್ರದೇಶಗಳಿಗೆ ಸೇರಿದ ತುಂಬಾ ಜನರೊಂದಿಗೆ ಆತ ಸಹಾ 1960 ರಲ್ಲಿ ಪಾರ್ಟಿಯಲ್ಲಿ ಸೇರಿದರು. ಆದರೆ ನಕ್ಸಲ್ಬರಿ ಹೋರಾಟ ಜ್ವಾಲೆಗಳು ಕೆರಳುತ್ತಲೇ ಆತ ಸಿಪಿಐನ ಬಿಟ್ಟು ಹಾಕಿ ಸಶಸ್ತ್ರ ವ್ಯವಸಾಯ ಕ್ರಾಂತಿಯಲ್ಲಿ ಮಗ್ನರಾದರು. 1972 ರಲ್ಲಿ ಆತನನ್ನು ಅರೆಸ್ಟ್ ಮಾಡಿ ತುರ್ತುಪರಿಸ್ಥಿತಿಯ ಕಾಲವೆಲ್ಲಾ ಜೈಲಿನಲ್ಲಿಟ್ಟರು. ಬಿಡುಗಡೆಯಾದ ಬಳಿಕ ವಿಪ್ಲವ ರೈತಾಂಗ ಹೋರಾಟಗಳ ಬುನಾದಿ ಹಾಕುವುದಕ್ಕೆ ಆತ ಮತ್ತೊಂದು ಸಲ ಜನರೊಳಗೆ ಆಳವಾಗಿ ನುಗ್ಗಿಕೊಂಡು ಹೋದರು. ಈ ದಿನ ಗಯಾ, ಔರಂಗಾಬಾದ್‌ಗಳಲ್ಲಿ ಜ್ವಲಿಸುತ್ತಿರುವ ಹೋರಾಟಗಳು ಅವೆ. ಈಗ ಆತ ನಮ್ಮ ನಡುವೆ ಇಲ್ಲ.

ಕ್ಷಿಪ್ರದಲ್ಲೇ ರೈತರು ಆ ದಿಗ್ಭ್ರಾಂತಿಯಿಂದ ಚೇತರಿಸಿಕೊಂಡು ಕೋಪೋದ್ರಿಕ್ತರಾದರು. ಪ್ರತಿಭಟನೆಯ ಪ್ರವಾಹ ಆ ಪ್ರಾಂತವನ್ನೆಲ್ಲಾ ಮುಳುಗಿಸಿ ಎತ್ತಿತು. 'ಕಾಮ್ರೇಡ್ ಜೀವಲಾಲ್ ಅಮರ್ ಹೈ' 'ಪೋಲೀಸ್ ಭೂಮಾಲೀಕ ಆಡಳಿತಕ್ಕೆ ಧಿಕ್ಕಾರ' ಎಂಬ ಘೋಷಣೆಗಳು ಗ್ರಾಮ ಸೀಮೆಯಾದ್ಯಂತ ಪ್ರತಿಧ್ವನಿಸಿದವು.

## ಮಧ್ಯಯುಗೀನ ಆಡಳಿತ

ಬಹಳ ಮಂದಿ ಬಿಹಾರವನ್ನು ಭಾರತದೇಶದಲ್ಲಿ ಅತಿ ಹಿಂದುಳಿದ ರಾಜ್ಯ ಎಂದು ಪರಿಗಣಿಸ್ತಾರೆ. ಭೂಮಾಲೀಕತ್ವಕ್ಕೆ ಸಂಬಂಧಿಸಿದ ಕೆಲವು ದುಷ್ಕೃತ್ಯಗಳ ನಿದರ್ಶನಗಳು ಅಲ್ಲಿ ಖಚಿತವಾಗಿ ಕಂಡುಬರುತ್ತವೆ. ಅಲ್ಲಿಯ ಭೂಮಾಲೀಕರ ಆಸ್ತಿಗಳ ಪಟ್ಟಿ ಓದಿದರೆ ಭೂಸುಧಾರಣಾ ಕಾನೂನುಗಳ ಕುರಿತು ದೊಡ್ಡದಾಗಿ ಹೇಳಿಕೊಳ್ಳುವ ಈ ದೇಶದಲ್ಲಿ ಯಾರಾದರೂ ಸರಿ ದಿಗ್ಭ್ರಮೆ ಹೊಂದುತ್ತಾರೆ. ಬುದ್ಧ ಗಯಾ ಮೆಹಂತೋ–40,000 ಎಕರೆಗಳು, ಸತ್ಯೇಂದ್ರ ಸಿಂಗ್–4,300 ಎಕರೆಗಳು, ಅಯ್‌ಜಾರ್ ಹುಸೇನ್–3,650 ಎಕರೆಗಳು, ನೇಮ್‌ಸಿಂಗ್–2,900 ಎಕರೆಗಳು.

ಅವರ ಬಳಿ ಅಪಾರವಾದ ಭೂಸಂಪತ್ತು ಇದ್ದುದಷ್ಟೇ ಅಲ್ಲ. ಅವರ ಮಧ್ಯಯುಗೀನ ರಾಜರ ಹಾಗೆ ಅಧಿಕಾರ ಚಲಾಯಿಸ್ತಾರೆ. ಕೆಲವು ನೂರು ಎಕರೆಗಳ ಭೂಮಿಯುಳ್ಳ ರಾಂವಿಲಾಸ್, ರಾಮೇಶ್ವರ್‌ಸಿಂಗ್‌ರೆಂದರೆ ನವಾಡಾ ಪ್ರಾಂತವೆಲ್ಲಾ ನಡುಕ. ವಯಸ್ಸಿನಲ್ಲಿರುವ ಮಹಿಳೆಯರೆಲ್ಲರೂ ಅವರಿಗೆ ಸುಖ ನೀಡಬೇಕು. ಬಡವರು, ದಲಿತರು ಹಾಲು, ಕೋಳಿಗಳು, ಮೇಕೆಗಳ ಕೊಟ್ಟು ಆ ಸೋದರರಿಬ್ಬರನ್ನು ತೃಪ್ತಿಗೊಳಿಸಬೇಕು. ಮನಾಟೂಗೆ ಸೇರಿದ ಜೀತ್‌ಸಿಂಗ್ ಮನ್ವಾರ್ ಮತ್ತೊಬ್ಬ ಹೆಸರಾಂತ ವ್ಯಕ್ತಿ. ಎದುರು ತಿರುಗಿದ ಕೂಲಿಗಳನ್ನು ತನ್ನ ಸಾಕು ಹುಲಿಗೆ ಆಹಾರವಾಗಿ ಹಾಕುತ್ತಿದ್ದನು. ಅದಕ್ಕೇ ಆತನನ್ನು ಮನಾಟೂಹುಲಿ ಎಂದು ಕರೆಯುತ್ತಿದ್ದರು.

ಆತನಿಗೆ 6,000 ಎಕರೆಗಳ ಭೂಸಂಪತ್ತು ಇತ್ತು. ಮನಾಟೂ ವ್ಯಾಪ್ತಿಯಲ್ಲಿನ 156 ಹಳ್ಳಿಗಳಲ್ಲಿ ಆತನದೇ ಯಜಮಾನಿಕೆ. ಆ ಪ್ರಾಂತದಲ್ಲೆಲ್ಲಾ ಬಿಟ್ಟಿ ಚಾಕ್ರಿ ಸರ್ವಸಾಧಾರಣವಾದ ವಿಷಯ. ಭೂಮಾಲೀಕರಲ್ಲಿ ಬಹುಮಂದಿ ಬ್ರಾಹ್ಮಣ, ಭೂಮಿಹಾರ್, ರಾಜಪುತ್ರರಂಥ ಶಕ್ತಿಶಾಲಿಗಳಾದ ಮೇಲ್ಜಾತಿಗಳಿಗೆ ಸೇರಿದವರೇ. ಅಲ್ಲಲ್ಲಿ ಕೆಲಮಂದಿ ಚಿಕ್ಕ, ಮಧ್ಯಮ ಜಾತಿಗಳಿಗೆ ಸೇರಿದ ಭೂಮಾಲೀಕರು–ಹೆಚ್ಚಾಗಿ ಯಾದವರು, ಕುರ್ಮಿಗಳು, ಇದ್ದಾಗ್ಯೂ ಹಿಂದುಳಿದ ಜಾತಿಗಳಲ್ಲಿ ಅಧಿಕಮಂದಿ

**End of Preview.**

**Rest of the book can be read @**

**[http://kinige.com/book/Naksalbari](http://kinige.com/book/Naksalbari)**

* * *